# 3

# ಕೊನೇಗಳಿಗೆ ಸಿದ್ಧತೆ

# (1:1-11)

ಒಂದು ಚಲನ ಚಿತ್ರವು ಭೂಕಂಪದಿಂದ ಪ್ರಾರಂಭವಾಗ ಬೇಕು ಮತ್ತು ಪರಾಕಾಷ್ಟೆಗೆ ನಡೆಸಬೇಕು ಎಂದು ಒಬ್ಬ ಗಣ್ಯ ಹಾಲಿವುಡ್ ಚಲನ ಚಿತ್ರ ನಿರ್ಮಾಪಕರು ಹೇಳುತ್ತಾರೆ. ಇದನ್ನು ಪ್ರಮಾಣವಾಗಿ ಉಪಯೋಗಿಸಿದರೆ, ಎರಡನೇಯ ಅಧ್ಯಾಯವು ಅಪೊಸ್ತಲರ ಕೃತ್ಯಕ್ಕೆ ಒಂದು ಅದ್ಭುತ ಪ್ರಾರಂಭವಾಗುತ್ತಿತ್ತು. ಯಾಕೆಂದರೆ, ಪವಿತ್ರಾತ್ಮನು ಉರಿಯುವ ಬೆಂಕಿಯ ನಾಲಗೆಯ ಮತ್ತು ಮಹಾ ಶಬ್ಧದ ಗಾಳಿ ಯೊಪಾದಿಯಲ್ಲಿ ಇಳಿದು ಬಂದನು! ಶಬ್ಧ ಮತ್ತು ಉತ್ಸಾಹದಿಂದ ಪ್ರಾರಂಭವಾಗುವ ಬದಲು, ಅಧ್ಯಾಯ 1 ಶಾಂತವಾಗಿ ಪ್ರಾರಂಭಿಸುತ್ತದೆ. ಯೇಸು ತನ್ನ ಶಿಷ್ಯರೊಂದಿಗೆ ಮಾತಾಡುವದರಿಂದ ಅದು ಪ್ರಾರಂಭವಾಗಿ ಒಂದು ವ್ಯಾವಹಾರದ ಕೂಟದಿಂದ ಮುಕ್ತಾಯಗೊಳ್ಳುತ್ತದೆ! ವ್ಯವಹರದ ಕೂಟಗಳು ಯಾವಾಗಲೂ ತುಂಬಾ ಉತ್ಸಾಹ ಭರಿತವಾಗಿರುವದಿಲ್ಲ (ಆಕಳಿಕೆ).

ಅಪೊಸ್ತಲರ ಕೃತ್ಯ ಪುಸ್ತಕವು ಈಗ ಹೀಗೆ ಏಕೆ ಪ್ರಾರಂಭವಾಗಿದೆ? ಇದಕ್ಕೆ ಕಾರಣ: ಅಪೊಸ್ತಲರ ಕೃತ್ಯಗಳು 2ರಲ್ಲಿ ಚಿತ್ರಿಸಲ್ಪಟ್ಟ ಮಾಹದಿನಕ್ಕೆ ಸಿದ್ಧತೆ ಬೇಕು. ಅಪೊಸ್ತಲರ ಕೃತ್ಯ 2ಕ್ಕೆ *ನಿತ್ಯತ್ವದಿಂದಲೇ* ದೇವರು ಸಿದ್ಧತೆ ಮಾಡುತ್ತಿದ್ದನು (ಎಫೆಸ 3:10, 11) - ಆದರೆ ಈಗ ಕೊನೇ ಗಳಿಗೆಯ ಸಿದ್ಧತೆಗೆ ಸಮಯ ಬಂದಿತ್ತು. ನಿರ್ಧಿಷ್ಟವಾಗಿ ಇದು ಅಪೊಸ್ತಲರ ಕೊನೇ ಗಳಿಗೆಯ ಸಿದ್ಧತೆಗೆ ಸಮಯವಾಗಿತ್ತು.

ಈ ಅಧ್ಯಾಯದಲ್ಲಿ ನಮಗೆ ಅನೇಕ ಪಾಠಗಳ ಕೊಡಲ್ಪಟ್ಟಿವೆ. ದೇವರ ಕಾರ್ಯಗಳನ್ನು ಮಾಡುವಾಗ ಸಾಕಾಗುವಷ್ಟು ಸಿದ್ಧತೆಯ ಪ್ರಾಮುಖ್ಯತೆಯ ಕುರಿತು ನಾವು ವಿಶೇಷವಾಗಿ ಕಲಿಯಬೇಕು.

## ಪುನರ್ವಿಮರ್ಶೆ ಕೊಡಲ್ಪಟ್ಟಿತು (1:1-5)

ತಾನು ಮೊದಲು ಬರೆದದ್ದನ್ನು ಓದುಗರಿಗೆ ನೆನಪಿಸಿ ಲೂಕನು ಅಪೊಸ್ತಲರ ಕೃತ್ಯವನ್ನು ಪ್ರಾರಂಭಿಸಿದನು: "ನಾನು ಮೊದಲು ಬರೆದ ಚರಿತ್ರೆಯಲ್ಲಿ ಯೇಸು ಮಾಡುವದಕ್ಕೂ[1] ಉಪದೇಶಿಸುವದಕ್ಕೂ[2] ಪ್ರಾರಂಭಿಸಿದ್ದೆಲ್ಲವನ್ನು ಹೇಳಿ ತಾನು ಆರಿಸಿಕೊಂಡಿದ್ದ ಅಪೊಸ್ತಲರಿಗೆ ಪವಿತ್ರಾತ್ಮನ ಮೂಲಕ ಅಜ್ಞೆಕೊಟ್ಟು ಮೇಲಣ ಲೋಕವನ್ನೇರಿದ ದಿನದ ವರೆಗೆ ವಿವರಿಸಿದೆನಷ್ಟೆ, ..." (ವಚನಗಳು 1, 2ಎ). "ಮೊದಲು ಬರೆದ ಚರಿತ್ರೆ" ಇದು ಲೂಕನು ಬರೆದ ಸುವಾರ್ತೆಯನ್ನು ಸೂಚಿಸುತ್ತದೆ. ಅವನು ಅಪೊಸ್ತಲರ ಕೃತ್ಯದಲ್ಲಿ "ಮೊದಲು ಬರೆದ ಚರಿತ್ರೆಯನ್ನು" ನೆನಪಿಸಿಕೊಳ್ಳುವಂತೆ ಸೇರಿಸಿದ್ದರಿಂದ, ತಾನು ಬರೆದ ಸುವಾರ್ತೆಯ ಕುರಿತು ಓದುಗರು ಪರಿಚಯಿಸಿಕೊಳ್ಳಬೇಕೆಂದು ಲೂಕನು ಅಪೇಕ್ಷಿಸಿರಬಹುದು. ಅದರಲ್ಲೂ ಕೊನೆಯ ಅಧ್ಯಾಯಗಳು.

ಲೂಕನು ಸುವಾರ್ತೆಯ ಕೊನೆಯ ದೃಷ್ಯದಲ್ಲಿ ಯೇಸು ದಿವಾರೋಹಣವಾಗುವದು ಮತ್ತು ಅಪೊಸ್ತಲರ ಯೆರೂಸಲೇಮಿಗೆ ಹಿಂತಿರುಗುವದನ್ನು ಕುರಿತು ಇದೆ (ಲೂಕ 24:50-53). ಅಪೊಸ್ತಲರ ಕೃತ್ಯಗಳು 1ರಲ್ಲಿ ನಾವು ಓದುವಂತೆ, ದಿವಾರೋಹಣವು ತಾನು ಆರಿಸಿಕೊಂಡಿದ್ದ ಅಪೊಸ್ತಲರಿಗೆ ಪವಿತ್ರಾತ್ಮನ ಮೂಲಕ ಆಜ್ಞೆಕೊಟ್ಟ ತರುವಾಯ ಆಯಿತು (ವಚನ 2ಬಿ). ಲೂಕನ ಸುವಾರ್ತೆಯಲ್ಲಿ ಗಮನಿಸುವಂತೆ, ಅಪೊಸ್ತಲರಿಗೆ ಕ್ರಿಸ್ತನ

"ಸಾಕ್ಷಿಗಳಾಗಿರುವದಕ್ಕೆ," ಪಾಪಪರಿಹಾರಕ್ಕೋಸ್ಕರ ದೇವರ ಕಡೆಗೆ ತಿರುಗಿಕೊಳ್ಳಬೇಕೆಂಬ ಮಾತು ಯೆರೂಸಲೇಮು ಮೊದಲುಗೊಂಡು ಸಮಸ್ತ ದೇಶದವರಿಗೂ ಆತನ ಹೆಸರಿನಲ್ಲಿ ಸಾರಲ್ಪಡಬೇಕೆಂತಲೂ "ಆಜ್ಞೆ" ಕೊಡಲ್ಪಟ್ಟಿತು (24:47). ಬೇರೆ ಮಾತುಗಳಲ್ಲಿ, "ಆಜ್ಞೆಯು" ಮಹಾ ಅಪ್ಪಣೆಗೆ ಸೂಚಿತವಾಗಿವೆ (ಮತ್ತಾಯ 28:18-20; ಮಾರ್ಕ 16:15, 16).

ಅಪೊಸ್ತಲರ ಕೃತ್ಯಗಳು 1:3ರಲ್ಲಿ ಲೂಕನು ಗಮನಿಸುವಂತೆ ಪುನರುತ್ಥಾನದ ತರುವಾಯ ಯೇಸು ತನ್ನ ಶಿಷ್ಯರಿಗೆ ಕಾಣಿಸಿಕೊಳ್ಳುವದರ ಮೂಲಕ ಅವರನ್ನು ಸಾಕ್ಷಿಗಳಾಗಿರುವದಕ್ಕೆ ಅರ್ಹಗೊಳಿಸಿದನು: "ಆತನು ಬಾಧೆ ಪಟ್ಟು ಸತ್ತ ಮೇಲೆ ತನ್ನನ್ನು ಜೀವಂತನೆಂದು ಅನೇಕ ಪ್ರಮಾಣಗಳಿಂದ ಅಪೊಸ್ತಲರಿಗೆ ತೋರಿಸಿಕೊಂಡನು. ನಾಲ್ವತ್ತು ದಿವಸಗಳವರೆಗೆ ಅವರಿಗೆ ಕಾಣಿಸಿಕೊಳ್ಳುತ್ತಾ ದೇವರ ರಾಜ್ಯದ ವಿಷಯವಾದ ಸಂಗತಿಗಳನ್ನು ಹೇಳುತ್ತಾ ಇದ್ದನು." ಸುವಾರ್ತೆಯಲ್ಲಿ, ಯೇಸುವಿನಿಂದ ದೊರೆತ ಮನವರಿಕೆ ಮಾಡುವ ಪುರಾವೆಗಳನ್ನು ಲೂಕನು ಉದಾಹರಣೆಯಾಗಿ ಕೊಟ್ಟನು, ಅವನ ಶಿಷ್ಯರು ಅವನನ್ನು ಮುಟ್ಟುವಂತೆ ಅವಕಾಶ ಮಾಡಿಕೊಟ್ಟನು, ಮತ್ತು ತಾನು ದೆವ್ವವಲ್ಲವೆಂದು ತೋರಿಸುವದಕ್ಕೆ ಅವರೊಂದಿಗೆ ಊಟ ಮಾಡಿದನು (ಲೂಕ 24:36-43; ಹೋಲಿಸು ಅಪೊಸ್ತಲರ ಕೃತ್ಯಗಳು 10:40, 41).

"ಯೇಸು" ಎಂಬ ಪದವನ್ನು ಪದಸಂಗ್ರಹದಲ್ಲಿ ನೋಡಿರಿ. ಯೇಸು ಮೊದಲು ಮಾಡಿದನು ನಂತರ ಬೋಧಿಸಿದನು ನಮ್ಮ ಬೋಧನೆಯು ಫಲಪ್ರದವಾಗಬೇಕಾದರೆ ಮೊದಲು ನಾವು ಬೋಧಿಸುವದನ್ನು ಜೀವಿಸಬೇಕು ಪುನರುತ್ಥಾನದ ನಂತರ ಯೇಸು ಕಾಣಿಸಿಕೊಂಡ ಅನೇಕ ದಾಖಲಿಸಲ್ಪಟ್ಟ ಸಂದರ್ಭಗಳು ಆತನು ಎದ್ದ ದಿನದಂದು ನಡೆಯಿತು. ಮೂರನೇಯ ವಚನದಲ್ಲಿ ಓದುವಂತೆ, ಯೇಸು *ಬಹು* ಕಾಲದ ವರೆಗೆ ಅನೇಕ ಬಾರಿ ಕಾಣಿಸಿಕೊಂಡನು.[3] (ಅಪೊಸ್ತಲರ ಕೃತ್ಯಗಳು 13:31), ನಿಖರವಾಗಿ ಹೇಳುವದಾದರೆ ನಾಲವತ್ತು ದಿನಗಳು. ಬಾಕ್ಲೆ ಅವರ ಭಾಷಾಂತರದಲ್ಲಿ "ನಾಲ್ವತ್ತು ದಿನಗಳ ಕಾಲದಲ್ಲಿ ಬೇರೆ ಬೇರೆ ಸಂದರ್ಭದಲ್ಲಿ ಅವರಿಗೆ ಯೇಸು ಕಾಣಿಸಿಕೊಂಡನು."[4]

ಭೂಮಿಯ ಮೇಲೆ ನಾಲ್ವತ್ತು ದಿನಗಳವರೆಗೆ ಯೇಸು ಉಳಿದುಕೊಂಡದ್ದರ ಉದ್ದೇಶವು ಕೇವಲ ತನ್ನ ಸ್ನೇಹಿತರೊಂದಿಗೆ ಅನ್ಯೋನ್ಯತೆಯನ್ನು ಅನುಭವಿಸುವದು ಮಾತ್ರವಾಗಿರಲ್ಲ. ಆದರೆ, ತನ್ನ ಶಿಷ್ಯರನ್ನು *ಸಿದ್ಧಗೊಳಿಸುವದಕ್ಕಾಗಿ* ಆತನು ತನ್ನ ನಿರ್ಗಮನವನ್ನು ತಡಮಾಡಿದನು. ಯೇಸು "ದೇವರರಾಜ್ಯದ ವಿಷಯವಾದ ಸಂಗತಿಗಳನ್ನು ಹೇಳುತ್ತಾ ಇದ್ದನು" (ವಚನ 3ಸಿ). ಯೇಸುವಿನ ವೈಯಕ್ತಿಕ ಸೇವೆಯ ಪ್ರಾರಂಭದಿಂದಲೂ "ದೇವರ ರಾಜ್ಯವು" ಯೇಸುವಿನ ಮುಖ್ಯ ಪ್ರಸ್ತಾಪವಾಗಿತ್ತು. (ಮತ್ತಾಯ 4:17.) ಆತನ ಅನೇಕ ಸಾಮ್ಯಗಳು "ಪರಲೋಕ ರಾಜ್ಯವು ಹೋಲಿಕೆಯಾಗಿದೆ ..." ಎಂದು ಪ್ರಾಂಭವಾಗುತ್ತವೆ (ಮತ್ತಾಯ 13:31, 33, 34, 44, 45, 47). ದೇವರ ರಾಜ್ಯದ ಕುರಿತು ತನ್ನ ಬೋಧನೆಗಳನ್ನು ತನ್ನ ಹಿಂಬಾಲಕರ ಮನಸ್ಸಿನಲ್ಲಿ ಪುನಃ ನವೀಕರಿಸಿದನು. ಇತರ ಸಂಗತಿಗಳಲ್ಲಿ, ದೇವರ ರಾಜ್ಯವು *ಬಲದೊಡನೆ* ಬರುವದೆಂಬ ತನ್ನ ವಾಗ್ದಾನವನ್ನು ನೆನಪು ಮಾಡಿಕೊಟ್ಟಿರಬಹುದು "... ಇಲ್ಲಿ ನಿಂತಿರುವವರೊಳಗೆ ಕೆಲವರು ದೇವರ ರಾಜ್ಯವು ಪ್ರಬಲವಾಗಿ ಬಂದಿರುವದನ್ನು ನೋಡುವ ತನಕ ಮರಣಹೊಂದುವದಿಲ್ಲ" (ಮಾರ್ಕ 9:1).

ನಾನು ಮತ್ತು ನೀವು ಒಂದು ಮಹಾ ಸೇವೆಗೆ ನಮ್ಮನ್ನು ಸಿದ್ಧ ಮಾಡಿಕೊಳ್ಳುವಾಗ, ಕರ್ತನ ಬೋಧನೆಗಳನ್ನು ನೆನಪುಮಾಡಿಕೊಳ್ಳುವದು ಪ್ರಯೋಜನಕಾರಿಯಾಗಿದೆ ಮತ್ತು "ಆತನು ನಮಗೆ ಮಹಾ ಉಪಕಾರವನ್ನು ಮಾಡಿದ್ದಾನೆ" ಎಂದು ನೆನಪುಮಾಡಿಕೊಳ್ಳಬೇಕು (ಕೀರ್ತನೆ 126:3).

## ವಾಗ್ದಾನ ಮಾಡಲ್ಪಟ್ಟ ಆಳ್ವಿಕೆ (1:4-8)

ದೇವರ ರಾಜ್ಯದ ಕುರಿತು ತನ್ನ ಶಿಷ್ಯರಿಗೆ ಬೋಧಿಸುವಾಗ ಒಂದು ದೊಡ್ಡ ಅಭ್ಯಂತರವನ್ನು

ಎದುರಿಸಬೇಕಾಯಿತು. ಯೇಸು "ರಾಜ್ಯ" ಎಂಬ ಪದವನ್ನು ಉಪಯೋಗಿಸುವಾಗ ಆತನ ಮನಸ್ಸಿನಲ್ಲಿ ಒಂದೇ ಆಲೋಚನೆಯಿತ್ತು; ಅಪೊಸ್ತಲರು "ರಾಜ್ಯ" ಎಂಬ ಪದವನ್ನು ಕೇಳಿದಾಗ ಅವರ ಮನಸ್ಸಿನಲ್ಲಿ ಬೇರೆ ಆಲೋಚನೆಯಿತ್ತು. ದೇವರು ತನ್ನ ಜನರ ಹೃದಯದಲ್ಲಿ ಮತ್ತು ಜನರ ಜೀವನದಲ್ಲಿ ಆಳುವಂಥ ಒಂದು ಆತ್ಮಿಕ ರಾಜ್ಯದ ಸ್ಥಾಪನೆಯು ಯೇಸುವಿನ ಮನಸ್ಸಿನಲ್ಲಿತ್ತು. ಯೇಸುವಿನ ಶಿಷ್ಯರ ಮನಸ್ಸಿನಲ್ಲಿ *ಭೂಲೋಕದ* ರಾಜ್ಯದ ಕುರಿತು ಇತ್ತು - ಮೆಸ್ಸಿಯನು ಇಸ್ರಾಯೇಲಿನ ವೈರಿಗಳನ್ನು ಸೋಲಿಸಿ ತನ್ನ ಸಿಂಹಾಸನವನ್ನು ಯೆರೂಸಲೇಮಿನಲ್ಲಿ ಸ್ಥಾಪಿಸುವನು.[5] ತನ್ನ ರಾಜ್ಯವು "ಲೋಕ*ದ್ದಲ್ಲ*" ಎಂದು ಯೇಸು ಒತ್ತುಕೊಟ್ಟು ಹೇಳಿದ್ದನು (ಯೋಹಾನ 18:36; ಒತ್ತಿ ಹೇಳಿದ್ದು ನನ್ನದು), ಆದರೆ ಆತನ ಅಪೊಸ್ತಲರಿಗೆ ಈ ತತ್ವವನ್ನು ಅರಿತುಕೊಳ್ಳುವದು ಕಷ್ಟಕರವಾಗಿತ್ತು.

ಅಪೊಸ್ತಲರ ಅಲ್ಪ ತಿಳುವಳಿಕೆಯು 1:4-8ರ ಹಿನ್ನೆಲೆಯಾಗಿದೆ. ಈ ವಚನಗಳಲ್ಲಿ, ಯೇಸು ಒಂದು ಅದ್ಭುತವಾದ *ವಾಗ್ದಾನವನ್ನು* ಮಾಡಿದ್ದು ಅವರ ಸಿದ್ಧತೆಯಲ್ಲಿ ಬಹು ಪ್ರಾಮುಖ್ಯ ಪಾತ್ರವಾಯಿತು. ಅಪೊಸ್ತಲರು ಒಂದು ರಾಜಕೀಯ ಸ್ಥಾಪನೆಯನ್ನು ಎದುರುನೋಡುತ್ತಿದ್ದರು, ಅದರಲ್ಲಿ ಒಂದು ಗೌರವದ ಸ್ಥಾನವನ್ನು ತಾವು ಪಡೆಯುತ್ತೇವೆಂದು ನೆನೆಸಿದರು. ಅವರಿಗಾಗಿ ದೇವರ ಯೋಜನೆ ಉತ್ತಮವಾಗಿದೆ, ಅವರು ಯೋಚಿಸುವದಕ್ಕಿಂತಲೂ ಬಲು ಉನ್ನತವಾದದ್ದು ಎಂದು ಅವರು ತಿಳುಕೊಳ್ಳಬೇಕೆಂದು ಯೇಸು ಬಯಸಿದನು. ಅವರು ಒಂದು ಸ್ಥಾನಕ್ಕಾಗಿ ಎದುರುನೋಡಿದರು; ಅವರು *ಬಲವನ್ನು* ಹೊಂದುವರು ಎಂದು ಯೇಸು ಹೇಳಿದನು.

> ಹೀಗಿರಲಾಗಿ ಆತನು ಅವರೊಂದಿಗೆ ಕೂಡಿದ್ದಾಗ್ಗೆ[6] ಅವರಿಗೆ ಯೋಹಾನನಂತೂ ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿದನು,[7] ನಿಮಗಾದರೋ ಇನ್ನು ಸ್ವಲ್ಪ ದಿವಸಗಳೊಳಗಾಗಿ ಪವಿತ್ರಾತ್ಮದಲ್ಲಿ ಸ್ನಾನವಾಗುವದು.[8] ಆದಕಾರಣ ನೀವು ಯೆರೂಸಲೇಮನ್ನು ಬಿಟ್ಟು ಹೋಗದೆ ತಂದೆ ಮಾಡಿದಂಥ ನೀವು ನನ್ನಿಂದ ಕೇಳಿದಂಥ ವಾಗ್ದಾನಕ್ಕೆ ಕಾದುಕೊಂಡಿರ್ರಿ ಎಂದು ಅಪ್ಪಣೆ ಕೊಟ್ಟನು (ವಚನಗಳು 4, 5).

"ದೇವರ ರಾಜ್ಯವು ಸಮೀಪವಾಗಿದೆ" ಎಂದು ತಂದೆಯು ಯೇಸುವಿನ ಮತ್ತು ಇತರರ ಮೂಲಕ ವಾಗ್ದಾನ ಮಾಡಿದ್ದನು (ಮತ್ತಾಯ 4:17); ರಾಜ್ಯವನ್ನು ಸ್ಥಾಪಿಸುವ ವಾಗ್ದಾನವು ಈಗ ನೆರವೇರುವದಕ್ಕಿತ್ತು.[9] ನಂತರ ತಂದೆಯು ಸ್ನಾನಿಕನಾದ ಯೋಹಾನನ ಮುಖಾಂತರ, ಮೆಸ್ಸಿಯನು ತನ್ನ ಹಿಂಬಾಲಕರನ್ನು ಪವಿತ್ರಾತ್ಮನಿಂದ ದೀಕ್ಷಾಸ್ನಾನ ಮಾಡಿಸುವನು ಎಂದು ವಾಗ್ದಾನ ಮಾಡಿದ್ದನು: "ನಾನಂತೂ ನಿಮಗೆ ನೀರಿನಲ್ಲಿ ಸ್ನಾನ ಮಾಡಿಸುವವನು; ಆದರೆ ನನಗಿಂತ ಶಕ್ತನು ಬರುತ್ತಾನೆ. ಆತನ ಕೆರಗಳ ಬಾರನ್ನು ಬಿಚ್ಚುವದಕ್ಕೂ ನಾನು ಯೋಗ್ಯನಲ್ಲ. ಆತನು ಪವಿತ್ರಾತ್ಮದಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ದೀಕ್ಷಾಸ್ನಾನ ಮಾಡಿಸುವನು" (ಲೂಕ 3:16).[10] ಅವರನ್ನು ನಡೆಸುವದಕ್ಕೆ ಪವಿತ್ರಾತ್ಮನು ಕಳುಹಿಸಲ್ಪಡುವನು ಎಂದು ಯೇಸು ತಾನೇ ಒತ್ತಿ ಹೇಳಿದ್ದನ್ನು ಅವರು ಕೇಳಿಸಿಕೊಂಡಿದ್ದರು (ಯೋಹಾನ 14:26; ಹೋಲಿಸು 15:26, 27; 16:12, 13; ಲೂಕ 12:12). ಪವಿತ್ರಾತ್ಮನನ್ನು ಕಳುಹಿಸುವ ವಾಗ್ದಾನವು "ಇನ್ನು ಸ್ವಲ್ಪ ದಿವಸದೊಳಗಾಗಿ" ನೆರವೇರುವದು ಎಂದು ಯೇಸು ಈಗ ಹೇಳುತ್ತಿದ್ದಾನೆ.

ರಾಜ್ಯದ ಸ್ಥಾಪನೆ ಮತ್ತು ಪವಿತ್ರಾತ್ಮ ಬರೋಣ - ಎರಡು ವಾಗ್ದಾನಗಳು ಒಂದುಕ್ಕೊಂದು ಬೇರ್ಪಡಿಸಲಾರದಷ್ಟು ಹೆಣೆದುಕೊಂಡಿದ್ದವು. ಪವಿತ್ರಾತ್ಮನನ್ನು ಕಳುಹಿಸುವ ವಾಗ್ದಾನದ ನೆರವೇರುವಿಕೆಯು ರಾಜ್ಯದ ಸ್ಥಾಪನೆಯ ವಾಗ್ದಾನದ ನೆರವೇರುವಿಕೆಗೆ ಬಹು ಅವಶ್ಯವಾಗಿತ್ತು.

ತಮ್ಮ ಮನಸ್ಸುಗಳು ಎಲ್ಲಿಯೋ ಇದ್ದವೆಂದು ಅಪೊಸ್ತಲರು ತೋರಿಸಿದರು. ರಾಜ್ಯದ ಕುರಿತ ಯೇಸುವಿನ ಬೋಧನೆಯು ಅವರ ರಾಜಕೀಯ ನಿರೀಕ್ಷೆಯನ್ನು ಪುನಶ್ಚೇ

ತನಗೊಳಿಸಿತು: "ಅವರು ತಿರಿಗಿ ಆತನನ್ನು - ಸ್ವಾಮಿ, ನೀನು ಇದೇ ಕಾಲದಲ್ಲಿ ಇಸ್ರಾಯೇಲ್ ಜನರಿಗೆ ರಾಜ್ಯವನ್ನು ಸ್ಥಾಪಿಸಿಕೊಡುವಿಯೋ?" ಎಂದು ಕೇಳಿದರು (ವಚನ 6). "ಪುನಸ್ಥಾಪನ" ಮತ್ತು "ಇಸ್ರಾಯೇಲ್" ಎಂಬ ಪದಗಳು ಅಪೊಸ್ತಲರ ಆಲೋಚನೆಯನ್ನು ಅರ್ಥಮಾಡಿಕೊಳ್ಳುವದಕ್ಕೆ ಮೂಲ ಪದಗಳಾಗಿವೆ: ಇಸ್ರಾಯೇಲು ಜಗತ್ತಿನಲ್ಲಿ ಶ್ರೇಷ್ಠವಾದ ರಾಜ್ಯವಾಗಿದ್ದ ಕಾಲದಲ್ಲಿ, ದಾವೀದ ಮತ್ತು ಸೊಲೊಮೋನನ ದಿನಗಳಲ್ಲಿನ ಇಸ್ರಾಯೇಲಿನ ನಿಜವಾದ ಮಹಿಮೆಯನ್ನು ಯೇಸು ಪುನಸ್ಥಾಪಿಸುತ್ತಾನೆಂದು ಅವರು ಇನ್ನೂ ಆಲೋಚಿಸುತ್ತಿದ್ದರು.[11] ಎಫ್. ಎಫ್. ಬ್ರೂಸ್ ಅವರು ಇದರ ಕುರಿತು ಬರೆಯುತ್ತಾರೆ: "ಅವರ ಪ್ರಸ್ತುತ ಪ್ರಶ್ನೆಯು, ತಾವು ರಾಜ್ಯದಲ್ಲಿ ಅಧಿಕಾರಿಗಳಾಗಿ ನೇಮಕಗೊಳ್ಳುವ ಉತ್ಕಟ ಬಯಕೆಯು ಕೊನೆಯ ಉರಿಯುವ ದೀಪವಾಗಿ ತೋರುತ್ತದೆ."[12]

"ಅವರು ಅತನನ್ನು ಕೇಳಿದರು" ಎಂಬ ವಾಕ್ಯವು, ಯೇಸುವನ್ನು ಅವರು ಪದೇ ಪದೇ ಕೇಳಿದರು ಎಂದು ಸೂಚಿಸುತ್ತದೆ. ಆತನು ಉತ್ತರಿಸುವಂತೆ ಅವರು ಒತ್ತಾಯಿಸಿದರು: "ಯಾವಾಗ, ಕರ್ತನೆ? ಯಾವಾಗ?"

ನಾನು ನೆನೆಸುತ್ತೇನೆ, ಯೇಸು ಉತ್ತರಿಸುವಾಗ ತನ್ನ ತಲೆಯನ್ನು ಅಲುಗಾಡಿಸಿ: "ತಂದೆಯ ಸ್ವಂತ ಅಧಿಕಾರದಲ್ಲಿಟ್ಟುಕೊಂಡಿರುವ ಕಾಲಗಳನ್ನೂ ಸಮಯಗಳನ್ನೂ ತಿಳುಕೊಳ್ಳುವದು ನಿಮ್ಮ ಕೆಲಸವಲ್ಲ.[13] ಆದರೆ ಪವಿತ್ರಾತ್ಮನು ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದುವಿರಿ ..." ಎಂದು ಹೇಳಿದನು (ವಚನಗಳು 7, 8ಎ). ರಾಜ್ಯದ ಸ್ವರೂಪವನ್ನು ಅವರು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲವೆಂದು ಯೇಸು ಅವರನ್ನು ಗದರಿಸಲಿಲ್ಲ; ರಾಜ್ಯದ ಅತ್ಮಿಕ ಸ್ವರೂಪವು ಬಹು ಬೇಗನೆ ಅವರಿಗೆ ತಿಳಿಯುವದು.[14] ಬದಲಾಗಿ, ದೇವರ ವೇಳಾಪಟ್ಟಿಯ ಕುರಿತ ಪ್ರಶ್ನೆಯನ್ನು ಉದ್ದೇಶಿಸಿ ಮಾತಾಡಿದನು. *ಯಾವಾಗ* ಎನ್ನುವದು ಯಾಕೆ *ಎನ್ನುವಷ್ಟು* ಪ್ರಾಮುಖ್ಯವಾಗಿಲ್ಲವೆಂದು ಯೇಸು ಒತ್ತಿಹೇಳಿದನು. ಒಟ್ಟಾರೆ ಅವನು ಹೇಳಿದ್ದು, "ನಾನು ನಿಮಗೆ ದೇವರ ವೇಳಾಪಟ್ಟಿಯನ್ನು ಕೊಡುವದಿಲ್ಲ, ಆದರೆ ದೇವರ ರಾಜ್ಯವು ಸಮೀಪಿಸಿದೆ ಎಂದು ನೀವು ಇದರಿಂದ ತಿಳುಕೊಳ್ಳುವಿರಿ": *ಪವಿತ್ರಾತ್ಮನು* ನಿಮ್ಮ ಮೇಲೆ ಬರಲು ನೀವು *ಬಲವನ್ನು* ಹೊಂದುವಿರಿ.

ದೇವರ ರಾಜ್ಯವು ಬಲದಿಂದ ಬರುವದೆಂದು ಯೇಸು ಹೇಳಿದ್ದನ್ನು ನೆನಪಿಸಿಕೊಳ್ಳಿರಿ (ಮಾರ್ಕ 9:1). ಈಗ ಯೇಸು ಹೇಳಿದ್ದು ಪವಿತ್ರಾತ್ಮನು ಬರಲು ಬಲವು ಬರುವದು. ಮತ್ತು ಆಗ ಆತನ ರಾಜ್ಯವನ್ನು ಸ್ಥಾಪಿಸುವ ವಾಗ್ದಾನ ನೆರವೇರುವದು.

ಈ ಎಲ್ಲ ವಿಚಾರಗಳಿಂದ ಅಪೊಸ್ತಲರ ತಲೆಗಳು ತಿರುಗಲಾರಂಭಿಸಿರಬಹುದು: "ನಿಮಗಾದರೋ ಇನ್ನು ಸ್ವಲ್ಪ ದಿವಸಗಳೊಳಗಾಗಿ ಪವಿತ್ರಾತ್ಮದಲ್ಲಿ ಸ್ನಾನವಾಗುವದು" (ವಚನ 5); "ಪವಿತ್ರಾತ್ಮನು ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದುವಿರಿ" (ವಚನ 8). ಯೇಸುವಿನ ಮಾತುಗಳ ಅರ್ಥವೇನೆಂದು ಅವರು ಅಶ್ಚರ್ಯಗೊಂಡಿರಬಹುದು.

ಯೇಸು ತನ್ನ ಚಕಿತಗೊಳಿಸುವ ವಿಷಯಗಳನ್ನು ಮುಕ್ತಾಯಗೊಳಿಸಲಿಲ್ಲ. ಕ್ರಿಸ್ತನ ರಾಜ್ಯದ ಸಾರ್ವತ್ರಿಕ ಸ್ವರೂಪವನ್ನು ಗ್ರಹಿಸುವದಕ್ಕೆ ಅಪೊಸ್ತಲರು ಕಷ್ಟಪಟ್ಟರು;[15] ಪಾಲೆಸ್ತೀನದಂಥ ಚಿಕ್ಕ ರಾಷ್ಟ್ರದ ಸುತ್ತಲೂ ಅವರು ವೈಭವದ ಕನಸುಗಳನ್ನು ಹೆಣೆದುಕೊಂಡಿದ್ದರು. "ನೀವು ಯೆರೂಸಲೇಮಿನಲ್ಲಿಯೂ, ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲಿಯೂ ಭೂಲೋಕದ ಕಟ್ಟ ಕಡೆಯ ವರೆಗೆ ನನಗೆ ಸಾಕ್ಷಿಗಳಾಗಿರುವಿರಿ" (ವಚನ 8) ಎಂದು ಯೇಸು ಹೇಳಿದನು! ಬಹುಶಃ ಅಪೊಸ್ತಲರಲ್ಲಿ ಒಬ್ಬನಾದರೂ ಸಿರಿಯದ ದಕ್ಷಿಣದ ತುದಿಗಿಂತ ಉತ್ತರಕ್ಕೆ ಬಹುದೂರ, ಗಲಿಲಾಯ ಸಮುದ್ರದ ಪೂರ್ವದ ದಂಡೆಗಿಂತ ಪೂರ್ವಕ್ಕೆ, ಐಗುಪ್ತದ ಸೀಮೆಗಿಂತ ದಕ್ಷಿಣಕ್ಕೆ ಅಥವಾ ಮಧ್ಯಪೂರ್ವದ ತೀರಕ್ಕಿಂತ ಹೆಚ್ಚು ಪಶ್ಚಿಮಕ್ಕೆ ಹೋಗಿರಲಿಕ್ಕಿಲ್ಲ. ಆತನ ಪುನರುತ್ಥಾನದ ಸುವಾರ್ತೆಯನ್ನು ತೆಗೆದುಕೊಂಡು, ಅವರು ಲೋಕದಲ್ಲೆಲ್ಲ ಪ್ರಯಾಣಿಸುವರೆಂದು ಯೇಸು ಅವರಿಗೆ ಹೇಳಿದನು![16]

ಯೇಸುವಿನಿಂದ ರೂಪಿಸಲ್ಪಟ್ಟ ಯೋಜನೆಯು ಪ್ರತಿಯೊಂದು ಪೀಳಿಗೆಗೆ ಸವಾಲಾಗಿದೆ: ಮನೆಯಲ್ಲಿ ಪ್ರಾರಂಭಿಸಿರಿ (ಯೆರೂಸಲೇಮ್), ಹತ್ತಿರದ ಭಾಗಗಳಿಗೆ ವಿಸ್ತರಿಸಿರಿ (ಯೂದಾಯ ಮತ್ತು ಸಮಾರ್ಯ), ಮತ್ತು ಕೊನೆಯಲ್ಲಿ ಸರ್ವ ಜಗತ್ತಿಗೆ ("ಭೂಲೋಕದ ಕಟ್ಟ ಕಡೆಯವರೆಗೆ") ಸುವಾರ್ತೆಯನ್ನು ತಲುಪಿಸಿರಿ![17]

ಅಪೊಸ್ತಲರ ಲೋಕದ ಕಟ್ಟ ಕಡೆಯ ವರೆಗೆ ಪ್ರಾಯಾಣ ಮಾಡುವಾಗ ಯೇಸು ಅವರಿಗೆ "ಸಾಕ್ಷಿಗಳಾಗಿರಬೇಕೆಂದು" ಹೇಳಿದನು (ವಚನ 8; ನೋಡಿರಿ ಲೂಕ 24:48). ಅಪೊಸ್ತಲರ ಕೃತ್ಯದಲ್ಲಿ "ಸಾಕ್ಷಿ" ಎನ್ನುವ ಪದವು ಮುಖ್ಯ ಪದವಾಗಿದೆ. "ಸಾಕ್ಷಿ" ಎಂದು ಭಾಷಾಂತರಗೊಂಡ ಪದವು ಸುಮಾರು ಇಪ್ಪತೊಂಬತ್ತು ಬಾರಿ ಬೇರೆ ಬೇರೆ ವಿಧದಲ್ಲಿ ಈ ಪುಸ್ತಕದಲ್ಲಿ ಉಪಯೋಗಿಸಲಾಗಿದೆ. ಉದಾಹರಣೆಗೆ "ನಾಮಪದವಾಗಿ" (ಅಥವಾ *"ಕ್ರೀಯಾ ಪದವಾಗಿ"*) ಅದು "ಸಾಕ್ಷಿ," "ಸಾಕ್ಷಿ ಹೇಳು" ಅಥವಾ "ಒಳ್ಳೆಯದಾಗಿ ಮಾತಾಡು" ಎಂದು ಭಾಷಾಂತರಗೊಂಡಿದೆ. ಇದರ ಮೂಲ ಪದವು *martus* (ಅಥವಾ *ಮಾರ್ಟ್ಟ್‌ರ*), "ಮಾರ್ಟಿಯರ್" ಅಂದರೆ ರಕ್ತಸಾಕ್ಷಿ ಎಂಬ ಪದ ನಮಗೆ ದೊರೆಯುತ್ತದೆ - ಯೇಸುವಿಗಾಗಿ ಮರಣಹೊಂದುವ ಮೂಲಕ ಸಾಕ್ಷಿ ಕೊಡುವ ವ್ಯಕ್ತಿ.

"ಸಾಕ್ಷಿ" ಎಂಬ ಪದದ ಮೂಲ ಅರ್ಥವು "ಕಣ್ಣಿಂದ ನೋಡಿದ ಸಾಕ್ಷಿ" ಎಂಬ ಪದದಿಂದ ವ್ಯಕ್ತವಾಗಿದೆ: ತಾನು ನೋಡಿದ್ದರ ಅಥವಾ ಕೇಳಿದ್ದರ ಕುರಿತು ಸಾಕ್ಷಿ ನುಡಿಯುವವನು (ಅಪೊಸ್ತಲರ ಕೃತ್ಯಗಳು 4:20). ಅಪೊಸ್ತಲರು ಒಂದು ವಿಶೇಷರೀತಿಯಲ್ಲಿ ಸಾಕ್ಷಿಗಳಾಗಿದ್ದರು ಯಾಕೆಂದರೆ ಅವರು ಆತನನ್ನು ಪುನರುತ್ಥಾನದ ತರುವಾಯ *ನೋಡಿದ್ದರು* (1:22). ಈ ಅರ್ಥದಿಂದ ಲೂಕನು "ಸಾಕ್ಷಿ" ಎಂಬ ಪದವನ್ನು ಸಹಜವಾಗಿ ಉಪಯೋಗಿಸಿದ್ದಾನೆ. ನಾನು ಮತ್ತು ನೀವು ಪುನರುತ್ಥಾನವಾದ ಕರ್ತನನ್ನು ನೋಡಿಲ್ಲವಾದ್ದರಿಂದ, ಅಪೊಸ್ತಲರಂತೆ ನಾವು ಸಾಕ್ಷಿಗಳಾಗಲು ಸಾಧ್ಯವಿಲ್ಲ.[18]

ಯೇಸುವಿನ ಪುನರುತ್ಥಾನವನ್ನು ಕುರಿತು ಅಪೊಸ್ತಲರ ಸಾಕ್ಷಿಯನ್ನು ಬಿಟ್ಟು ಬೇರೆ ಸಾಕ್ಷಿಯನ್ನು ಸೂಚಿಸುವದಕ್ಕೆ ಲೂಕನು "ಸಾಕ್ಷಿಯ" ಇನೊಂದು ರೀತಿಯ ನಾಮಪದವನ್ನು ಮತ್ತು ಕ್ರೀಯಾಪದವನ್ನು ಆಗಾಗ್ಗೆ ಉಪಯೋಗಿಸಿದನು.[19] ಉದಾಹರಣೆಗೆ, ಮೊದಲ ಕ್ರೈಸ್ತ ರಕ್ತಸಾಕ್ಷಿ ಸ್ತೇಫನನು ಕ್ರಿಸ್ತನ "ಸಾಕ್ಷಿ" ಎಂದು ಕರೆಯಲ್ಪಟ್ಟನು (22:20). ಸ್ತೇಫನನಂತೆ ನಾವೂ ಸಾಕ್ಷಿಗಳಾಗಬಹುದು: ದೇವರು ಏನು ಮಾಡಿದ್ದಾನೆಂದು ನಾವು ಹೇಳಿ[20] (ವಿಶೇಷವಾಗಿ *ನಮ್ಮ* ಜೀವನದಲ್ಲಿ) ಸಾಯುವದಕ್ಕೂ ಸಿದ್ಧರಾಗಬೇಕು! ಮನೆಯಲ್ಲಿಯೂ ಮತ್ತು ಮನೆಯಿಂದ ದೂರವಿರುವಾಗಲೂ ಕ್ರೈಸ್ತರ ತಮ್ಮ ನಂಬಿಕೆಯನ್ನು ಧೈರ್ಯದಿಂದ ಸಾರುವ ಅವಶ್ಯಕತೆ ಇಂದಿನ ದಿನಗಳಲ್ಲಿ ಇದೆ!

ಈ ಕಾರ್ಯವನ್ನು ಪೂರ್ಣಗೊಳಿಸುವದರಲ್ಲಿ ಸಿದ್ಧತೆ ಮಾಡಿಕೊಳ್ಳುವದರ ಮುಖ್ಯ ಭಾಗವು ಅದರ ಸವಾಲನ್ನು ಗುರುತಿಸುವದು ಮತ್ತು ಅದನ್ನು ನೆರವೇರಿಸಲು ದೇವರು ಶಕ್ತಿಯನ್ನು ನಮಗೆ ಕೊಡುತ್ತಾನೆಂದು ಅರಿತುಕೊಳ್ಳಬೇಕು. ಅಪೊಸ್ತಲರಿಗೆ ಇದ್ದ ಅದ್ಭುತಗಳನ್ನು ಮಾಡುವ ಶಕ್ತಿ ನಮಗಿರಲಿಕ್ಕಿಲ್ಲ, ಆದರೆ "ನಮ್ಮಲ್ಲಿ ಕಾರ್ಯ ಮಾಡುವ ಶಕ್ತಿ" ನಮ್ಮಲ್ಲಿದೆ (ಎಫೆಸ 3:20)!

## ಹಿಂತಿರುಗಿ ಬರುವದನ್ನು ಪ್ರಕಟಿಸಿದ್ದು (1:9-11)

ನಾಲ್ವತ್ತು ದಿನಗಳ ತರುವಾಯ, ಯೇಸು ತಾನು ಮಾಡಬೇಕಾಗಿರುವದನ್ನು ಮಾಡಿದ ನಂತರ, ಆತನು ಪರಲೋಕಕ್ಕೆ ಹಿಂತಿರುಗುವದಕ್ಕೆ ಸಮಯ ಬಂದಿತ್ತು. ಲೂಕ 24:50, 51ರಲ್ಲಿ ಹೀಗೆ ನಮೂದಿಸುತ್ತಾನೆ, "ಮತ್ತು ಆತನು ಅವರನ್ನು ಬೇಥಾನ್ಯದ ತನಕ ಕರಕೊಂಡುಹೋಗಿ ತನ್ನ ಕೈಗಳನ್ನು ಎತ್ತಿ ಅವರನ್ನು ಆಶೀರ್ವದಿಸಿದನು. ಅಶೀರ್ವದಿಸುತ್ತಿರುವಾಗ ಆತನು ಅವರನ್ನು ಬಿಟ್ಟು ಪರಲೋಕಕ್ಕೆ ಒಯ್ಯಲ್ಪಟ್ಟನು." ಅಪೊಸ್ತಲರ ಕೃತ್ಯಗಳು

1, ದಿವಾರೋಹಣವನ್ನು ಈ ಮಾತುಗಳಲ್ಲಿ ವಿವರಿಸುತ್ತದೆ: "ಈ ಮಾತುಗಳನ್ನು ಹೇಳಿದ ಬಳಿಕ ಅವರು ನೋಡುತ್ತಾ ಇದ್ದ ಹಾಗೆ ಆತನು ಎಲಿಸಲ್ಪಟ್ಟನು; ಮೋಡವು ಆತನನ್ನು ಕವಿದುಕೊಂಡದ್ದರಿಂದ ಅವರ ಕಣ್ಣಿಗೆ ಮರೆಯಾದನು" (ವಚನ 9).[21]

ಆತನ ಭೂಲೋಕದ ಯಾತ್ರೆಯನ್ನು ಯೇಸುವಿನ ದಿವಾರೋಹಣವು ಸಂಪೂರ್ಣಗೊಳಿಸಿತು. ಆತನು ತನ್ನ ಕೆಲಸವನ್ನು ಮುಗಿಸಿದ್ದನು; ಆತನು ಮಹಿಮೆಯ ತನ್ನ ಮನೆಗೆ ತೆರಳುವದಕ್ಕಿದ್ದನು![22] ಶಿಷ್ಯರು ಮಾತ್ರ ಗಲಿಬಿಲಿಗೊಳಗಾಗಿದ್ದರು. ವಚನ 10 ನಮೂದಿಸುವಂತೆ "ಆತನು ಹೋಗುತ್ತಿರುವಾಗ ಅವರು ಆಕಾಶದ ಕಡೆಗೆ ದೃಷ್ಟಿಸಿ ನೋಡು ತ್ತಿರಲಾಗಿ." ಪುನರುತ್ಥಾನದ ತರುವಾಯ ಯೇಸು ಅಶ್ಚರ್ಯಕರವಾಗಿ ತೆರಳಿದ್ದನ್ನು ಅವರು ನೋಡುವದು ಇದು ಮೊದಲಬಾರಿಯಲ್ಲ (ಲೂಕ 24:31). ಕಳೆದ ನಾಲ್ವತ್ತು ದಿನಗಳಲ್ಲಿ ಅನೇಕ ಬಾರಿ ಆದಂತೆ ಆತನು ಒಮ್ಮೆಲೆ ಕಾಣಿಸಿಕೊಳ್ಳುವನೋ ಅಥವಾ ಆತನು ನಿಜವಾ ಗಿಯೂ ಹೋದನೋ ಎಂದು ಅವರು ವಿಸ್ಮಯಗೊಂಡಿರಬಹುದು (ಯೋಹಾನ 20:16, 19).

ಅಪೊಸ್ತಲರು ಬಹುಕಾಲ ಅಚ್ಚರಿಪಡಬೇಕಾಗಿರಲಿಲ್ಲ, ಯಾಕೆಂದರೆ "ಶುಭ್ರವಸ್ತ್ರಧಾರಿಗ ಳಾದ ಇಬ್ಬರು ಪುರುಷರು ಪಕ್ಕನೆ ಅವರ ಹತ್ತಿರ ನಿಂತುಕೊಂಡರು" (ವಚನ 10ಬಿ). ದೇವರಿಂದ ಕಳುಹಿಸಲ್ಪಟ್ಟ ದೇವದೂತರಿವರು.[23] ಮತ್ತು ಅವರು "ಗಲಿಲಾಯದವರೇ, ನೀವು ಯಾಕೆ ಆಕಾಶದ ಕಡೆಗೆ ನೋಡುತ್ತಾ ನಿಂತಿದ್ದೀರಿ?[24] ನಿಮ್ಮ ಬಳಿಯಿಂದ ಅಕಾಶದೊಳಕ್ಕೆ ಸೇರಿ ಸಲ್ಪಟ್ಟಿರುವ ಈ ಯೇಸು ಯಾವ ರೀತಿಯಲ್ಲಿ ಅಕಾಶದೊಳಕ್ಕೆ ಹೋಗಿರುವದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ಬರುವನು" ಎಂದು ಹೇಳಿದರು (ವಚನ 11).

ಅಪೊಸ್ತಲರನ್ನು ಮಾನಸಿಕವಾಗಿಯೂ ಮತ್ತು ಭಾವನಾತ್ಮಕವಾಗಿಯೂ ಸಿದ್ಧಗೊಳಿಸುವಲ್ಲಿ ದೇವದೂತರ ಮಾತುಗಳು ಪ್ರಾಮುಖ್ಯತೆ ವಹಿಸಿದವು. ಸಂದೇಶದ ಮೊದಲ ಭಾಗದಲ್ಲಿ ಒಂದು *ಸವಾಲಿತ್ತು*: "ನಿಮ್ಮ ಬಳಿಯಿಂದ ಆಕಾಶದೊಳಕ್ಕೆ ಸೇರಿಸಲ್ಪಟ್ಟಿರುವ ಈ ಯೇಸು ..." ಯೇಸು ಹೊರಟುಹೋದನು. ಕಳೆದ ನಾಲ್ವತ್ತು ದಿಗಳಿಂದ ಅವರಿಗೆ ಕಾಣಿಸಿಕೊಂಡಂತೆ ಇನ್ನು ಆತನು ಕಾಣಿಸಿಕೊಳ್ಳುವದಿಲ್ಲ. ಆತನು ಪರಲೋಕದಲ್ಲಿದ್ದಾನೆ, ಆದುದರಿಂದ ಆತನ ಕೆಲವು ಇನ್ನು ಅವರದಾಗಿತ್ತು! ಸಂದೇಶದ ಎರಡನೇಯ ಭಾಗದಲ್ಲಿ *ಆದರಣೆಯಿತ್ತು*: "ಈ ಯೇಸು ಯಾವ ರೀತಿಯಲ್ಲಿ ಆಕಾಶದೊಳಕ್ಕೆ ಹೋಗಿರುವದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ಬರುವನು" ಯೇಸು ಪರಲೋಕಕ್ಕೆ ಎಲಿಹೋಗಿರಬಹುದು, ಆದರೆ ಒಂದು ದಿನ ಆತನು ಹಿಂತಿರುಗಿರುತ್ತಾನೆ! "ಈ ಯೇಸು ಯಾವ ರೀತಿಯಲ್ಲಿ ಆಕಾಶದೊಳಗೆ ಹೋಗಿ ರುವದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ಬರುವನು" ಯೇಸು ಪರಲೋಕಕ್ಕೆ ಹೋದಲ್ಲಿ ಏನಾಗುತ್ತದೋ ಅದರ ಪರಿವೆಯಿಲ್ಲದೆ, ಅಂತ್ಯದಲ್ಲಿ ಕರ್ತನು ಮತ್ತೆ ಬಂದು ಎಲ್ಲ ಸಂಗತಿಗಳನ್ನು ಸರಿಪಡಿಸುತ್ತಾನೆ![25] ಶಿಷ್ಯರೆಲ್ಲರೂ *"ಯೆರೂಸಲೇಮಿಗೆ ಸಂತೋಷದಿಂದ ಹಿಂತಿರುಗಿದರು"* ಎಂದು ಲೂಕನು ತನ್ನ ಸುವಾರ್ತೆಯಲ್ಲಿ ನಮೂದಿಸಿದ್ದಾನೆ (ಲೂಕ 24:52 ಒತ್ತಿ ಹೇಳಿದ್ದು ನನ್ನದು). ಜಯವು ನಿಶ್ಚಿತ!

ಆದಿಕ್ರೈಸ್ತರಿಗೆ ಎರಡನೇಯ ಬರೋಣದ ವಾಗ್ದಾನವು ಆದರಣೆಗೆ ಬಹು ಅಮೂಲ್ಯ ವಾದ ಮೂಲವಾಗಿತ್ತು. ಅವರು ಸದಾಕಾಲ ಪ್ರಾರ್ಥಿಸಿದರು, "ಮಾರನಾಥಾ"[26] (1 ಕೊರಿಂಥ 16:22) - "ಕರ್ತನಾದ ಯೇಸುವೇ, ಬಾ" (ಪ್ರಕಟನೆ 22:20)! ಯೇಸು ಮತ್ತೆ ತಿರುಗಿ ಬರುವನು ಎಂದು ದೇವದೂತರು ಅಪೊಸ್ತಲರಿಗೆ ಭರವಸೆ ನೀಡಿದಂತೆ, ನಾವೂ ಭರವಸೆಯುಳ್ಳವರಾಗಿರೋಣ ಮತ್ತು ಆತನ ಬರೋಣವು, "ಅದೇ ರೀತಿಯಲ್ಲಿರುತ್ತದೆ," ಆತನು ಪರಲೋಕಕ್ಕೆ ಎಲಿಹೋದಂತೆ - ಆಕಸ್ಮಿಕವಾಗಿ, ಕಣ್ಣಿಗೆ ಕಾಣುವಂತೆ, ಮೋಡಗಳಲ್ಲಿ ಮತ್ತು ಬಲದಿಂದ.[27] ಮೊದಲ ಶತಮಾನದ ಕ್ರೈಸ್ತರು ನಂಬಿದಂತೆ ನಾವು ಎರಡನೇಯ ಬರೋಣದಲ್ಲಿ ನಂಬಿಕೆಯಿಟ್ಟರೆ, ಅದು ನಮ್ಮ ಜೀವನದಲ್ಲಿ ಎಂಥಾ ಬದಲಾವಣೆಯನ್ನು ಮಾಡಲು ಸಾಧ್ಯ! ( ನೋಡಿರಿ 2 ಪೇತ್ರ 3:10, 11.)

## ಮುಕ್ತಾಯ

ಸಾಲ್ವೇಶನ್ ಆರ್ಮಿಯ (ರಕ್ಷಣೆಯ ಸೇನೆ) ಸ್ಥಾಪಕರಾದ ವಿಲ್ಲಿಯಮ್ ಭೂತ್ ಅವರು ೮೦ರ ದಶಕದಲ್ಲಿದ್ದಾಗ ಸುಮಾರಾಗಿ ಕುರುಡರಾದರು. ಅವರ ಮೆಚ್ಚಿನ ಸತ್ಯವೇದದ ಭಾಗವು ಅಪೊಸ್ತಲರ ಕೃತ್ಯವಾಗಿತ್ತು ಮತ್ತು ಅವರು ಪುಸ್ತಕವನ್ನು ಪುನಃ ಪುನಃ ಓದಿಸಿಕೊಳ್ಳುತ್ತಿದ್ದರು. ಅವರು ಹಾಸಿಗೆಯ ಮೇಲಿದ್ದಾಗ ತಮ್ಮ ಸತ್ಯವೇದವನ್ನು ತಮ್ಮ ಕಡೆಗೆ ತರಿಸಿಕೊಳ್ಳುತ್ತಿದ್ದರು. ಹಳೆಯದಾಗಿದ್ದ ಅಪೊಸ್ತಲರ ಕೃತ್ಯವಿರುವ ಭಾಗದ ಮೇಲೆ ತಮ್ಮ ಕೈಗಳನ್ನು ಆಡಿಸಿ, "ಮತ್ತೆ ಹಾಗೆಯೇ ಮಾಡು ಕರ್ತನೇ, ಮತ್ತೆ ಹಾಗೆಯೇ ಮಾಡು" ಎಂದು ಉಚ್ಚರಿಸುತ್ತಿದ್ದರು.[28]

ಪವಿತ್ರಾತ್ಮನ ಸ್ನಾನ ಪಂಚಾಶತ್ತಮ ದಿನದಲ್ಲಿ ಅಪೊಸ್ತಲರಿಗಾದಂತೆ, ಮತ್ತು ಪಸ್ಕಹಬ್ಬದಲ್ಲಿ ಯೇಸುವಿನ ಬಾಧಾನುಭವದ ಸ್ನಾನವಾದಂತೆ, ದೇವರು ಇನ್ನೊಂದನ್ನು ನಮಗೆ ಕೊಡುವದಿಲ್ಲ. ಎರಡೂ ಒಂದೇ ಬಾರಿಯ ಘಟನೆಗಳು. ಆದರೆ, ಸುವಾರ್ತೆಯನ್ನು, ನಾವು ಜೀವಿಸುವ ಸ್ಥಳ, ನಂತರ ಸಮೀಪದ ಸ್ಥಳಗಳು ಮತ್ತು ಕಟ್ಟಕಡೆಯಲ್ಲಿ ಸರ್ವ ಜಗತ್ತಿಗೆ, ತಲುಪಿಸುವ ತನ್ನ ಉದ್ದೇಶವನ್ನು ನಮ್ಮ ಮೂಲಕ ಕಾರ್ಯಗತವಾಗುವಂತೆ ದೇವರು ಮಾಡುತ್ತಾನೆ! ಈ ದಿಶೆಯಲ್ಲಿ ನಾವು ಇನ್ನೂ ಪ್ರಾರ್ಥಿಸಬಹುದು, "ಮತ್ತೆ ಹಾಗೆಯೇ ಮಾಡು ಕರ್ತನೇ, ಮತ್ತೆ ಹಾಗೆಯೇ ಮಾಡು, ನಮ್ಮ ಮೂಲಕ ಮಾಡು!"

## ದೃಷ್ಯ ಸಂಬಂಧವಾದ – ಟಿಪ್ಪಣಿ

ಈ ಪಾಠಕ್ಕೆ ಕೆಳಗಿನವುಗಳು, ವಚನ 6ರಿಂದ 8ರ ವರೆಗೆ ಮಾತಾಡುವಾಗ ವಸ್ತು ಪಾಠವಾಗಿ ಗಮನಸೆಳೆಯುವವುಗಳನ್ನಾಗಿ ಉಪಯೋಗಿಸಬಹುದು ಅಥವಾ ಪಾಠಕ್ಕೆ ಮುಕ್ತಾಯವಾಗಿ: ಒಂದು ಚಿಕ್ಕ ಹೃದಯವನ್ನು ಚಿತ್ರಿಸಿ, ಅದನ್ನು "ನಾನು" ಎಂದು ಗುರುತಿಸಿರಿ. ಒಂದು ದೊಡ್ಡ ಹೃದಯವನ್ನು ಮಾಡಿರಿ. ಒಂದು ಬದಿಯಲ್ಲಿ "ಯೆರೂಸಲೇಮ್" ಎಂದು ಬರೆಯಿರಿ; ಅದನ್ನು ತಿರುಗಿಸಿ "ನನ್ನ ಪಟ್ಟಣ" ಎಂದು ಬರೆಯಿರಿ. ಇನ್ನೂ ದೊಡ್ಡ ಹೃದಯವನ್ನು ಮಾಡಿರಿ. "ಯೂದಾಯ ಮತ್ತು ಸಮಾರ್ಯ" ಎಂದು ಒಂದು ಬದಿಯಲ್ಲಿಗುರುತಿಸಿರಿ ಮತ್ತು "ನನ್ನ ರಾಷ್ಟ್ರ" ಎಂದು ಇನ್ನೊಂದು ಬದಿಯಲ್ಲಿ ಗುರುತಿಸಿರಿ. ಕೊನೆಯದಾಗಿ ಇನ್ನೊಂದು ಹೃದಯವನ್ನು ಮಾಡಿರಿ, ಎಲ್ಲಿಕ್ಕಿಂತಲೂ ದೊಡ್ಡದು. ಒಂದು ಬದಿಯಲ್ಲಿ "ಲೋಕದ ಕಟ್ಟಕಡೆ" ಎಂದು ಬರೆಯಿರಿ; ಮತ್ತೊಂದು ಬದಿಯಲ್ಲಿ "ಜಗತ್ತು" ಎಂದು ಬರೆಯಿರಿ. ಈ ಎಲ್ಲ ಹೃದಯಗಳನ್ನು ಒಂದು ಪಾಕೀಟಿನಲ್ಲಿ ಹಾಕಿರಿ ಮತ್ತು ಅದರ ಮೇಲೆ ಹೀಗೆ ಬರೆಯಿರಿ: "ನನ್ನ ಹೃದಯವು ಎಷ್ಟು ದೊಡ್ಡದಿದೆ?" ಅಪೊಸ್ತಲರ ಕೃತ್ಯಗಳು 1:8ರ ಕುರಿತು ನೀವು ಮಾತಾಡುವಾಗ "ನನ್ನ ಹೃದಯವು ಯೆರೂಸಲೇಮನ್ನು ತೆಗೆದುಕೊಳ್ಳುವಷ್ಟು ದೊಡ್ಡದಿದೆಯೋ?" "ಯೆರೂಸಲೇಮ್" ಎಂದು ಬರೆದಿರುವ ಹೃದಯವನ್ನು ಹೊರಗೆ ತೆಗೆದು, ಅನ್ವಯವನ್ನು ಹೇಳುವದಕ್ಕೆ ತಿರುಗಿಸಿರಿ. ಇದನ್ನು ಸ್ವಲ್ಪ ದೊಡ್ಡ ಹೃದಯ ಮತ್ತು ಇನ್ನೂ ಸ್ವಲ್ಪ ದೊಡ್ಡ ಹೃದಯದೊಂದಿಗೆ ಮಾಡಿರಿ, ಕೊನೆಗೆ, "ನನ್ನ ಹೃದಯವು ಕೇವಲ ನನ್ನ ಮತ್ತು ನನಗೆ ಸಂಬಂಧಿಸಿದವುಗಳನ್ನು ಕುರಿತು ಮಾತ್ರ ತೆಗೆದುಕೊಳ್ಳುತ್ತದೋ" ಎಂದು ಪ್ರಶ್ನಿಸಿರಿ.

ಒಂದು ಆಲೋಚನೆಯನ್ನು ಈ ದೃಷ್ಯ ಸಹಾಯದಿಂದ ಉಪಯೋಗಿಸಬಹುದು: "ಕೆಲವರು ಕೇಳುವಂತೆ," "ನಮ್ಮ ದೇಶದಲ್ಲಿ ಇಷ್ಟು ಜನರು ಸಾಯುತ್ತಿರುವಾಗ, ಸುವಾರ್ತಾ ಸೇವಕರನ್ನು ಹೊರದೇಶಕ್ಕೆ ಕಳುಹಿಸುವದಕ್ಕೆ ಯಾಕೆ ಅಷ್ಟು ಹಣ ಖರ್ಚು ಮಾಡಬೇಕು?" ಯಾಕೆ? ನಾವು ಹೀಗೆ ಕೇಳಬಹುದು, ನಮ್ಮ ರಾಜ್ಯದಲ್ಲಿ ಅಷ್ಟು ಜನ ಸಾಯುತ್ತಿರುವಾಗ, ನಮ್ಮ ದೇಶದಲ್ಲಿ ಸುವಾರ್ತಾ ಸೇವೆಯಾಗದ ಪ್ರದೇಶಗಳಿಗೆ ಸೇವಕರನ್ನು ಕಳುಹಿಸುವದಕ್ಕೆ ಯಾಕೆ ಅಷ್ಟು ಹಣ ವೆಚ್ಚ ಮಾಡಬೇಕು? ಅಥವಾ "ನಮ್ಮ ಪಟ್ಟಣದಲ್ಲಿ ಅಷ್ಟು ಜನ ಸಾಯುತ್ತಿರುವಾಗ ರಾಜ್ಯದಲ್ಲಿ ಸುವಾರ್ತೆಯನ್ನು ಹಂಚುವದಕ್ಕೆ ಯಾಕೆ ವೆಚ್ಚ ಮಾಡಬೇಕು?" (ಸ್ವಲ್ಪ ನಿಲ್ಲಿರಿ.)

ಅಥವಾ "ನನಗೆ ಅಷ್ಟು ಅವಶ್ಯಕತೆಯಿರುವಾಗ ಈ ಪಟ್ಟಣಕ್ಕೆ ಸುವಾರ್ತೆ ಮುಟ್ಟಿಸಲು ಯಾಕೆ ಹಣ ವೆಚ್ಚ ಮಾಡಬೇಕು?" (ಸ್ವಲ್ಪ ನಿಲ್ಲಿರಿ.) ಉತ್ತರವು ಬಹಳ ಸರಳವಾಗಿದೆ: "ಯಾಕೆಂದರೆ ನಾವು *ಕ್ರೈಸ್ತರು,* ಅದಕ್ಕೆ."

ಮುಂದಿನ ದೃಷ್ಯ ಸಹಾಯವನ್ನು "ಸಾಕ್ಷಿ" ಎಂಬ ಪದದ ಅರ್ಥವನ್ನು ಚರ್ಚಿಸುವಾಗ ಉಪಯೋಗಿಸಬಹುದು: ಒಂದು ಸುಮಾರಾಗಿ ದೊಡ್ಡ ಹಲಗೆಯನ್ನು ತೆಗೆದುಕೊಂಡು ಅದನ್ನು ಅರ್ಧ ಮಡಿಕೆ ಮಾಡಿರಿ. ಅದರ ಮುಂಭಾಗದಲ್ಲಿ "ನೀವು ಎಷ್ಟು ಉತ್ತಮ ಸಾಕ್ಷಿಗಳಾಗಿದ್ದೀರಿ?" ಎಂದು ಬರೆಯಿರಿ, ಅದರ ಹಿಂದುಗಡೆ, ಪತ್ರಿಕೆಗಳಿಂದ ಕತ್ತರಿಸಿದ ಅನೇಕ ವಸ್ತುಗಳ ಚಿತ್ರಗಳನ್ನು ಅಂಟಿಸಿರಿ (12 ರಿಂದ 15 ವಸ್ತುಗಳು). ಮಡಿಕೆಯ ಒಳಗಡೆ ಈ ಮಾತುಗಳನ್ನು ಬರೆಯಿರಿ: "1. ದೇವರು ನಿನಗಾಗಿ ಮಾಡಿದ್ದೆಲ್ಲವನ್ನು ನೀನು ಗಮನಿಸಿರುವಿಯಾ? 2. ಇತರರಿಗೆ ಇದನ್ನು ನೀನು ಹೇಳುವಿಯಾ?" ಸಹಾಯವನ್ನು ನೀನು ಉಪಯೋಗಿಸಲು: ಮುಂದಿನ ಭಾಗದ ಪ್ರಶ್ನೆಯನ್ನು ತೋರಿಸಿರಿ. ನಿಮ್ಮ ಶ್ರೋತೃಗಳಿಗೆ ಕೆಲವು ಕ್ಷಣಗಳ ವರೆಗೆ ನೀವು ಅವರಿಗೆ ಏನನ್ನೋ ತೋರಿಸುವವರಿದ್ದೀರಿ ಎಂದು ಹೇಳಿರಿ. ಅವರು ಎಷ್ಟು ಸಾಧ್ಯವೊ ಅಷ್ಟು ನೆನಪಿಡುವಂತೆ ಹೇಳಿರಿ. ಈ ಮಡಿಕೆಯನ್ನು ತಿರುಗಿಸಿರಿ ಮತ್ತು ಅವರು ಅದರಲ್ಲಿರುವ ವಸ್ತುಗಳನ್ನು ಐದು ಕ್ಷಣಗಳವರೆಗೆ ಗಮನಿಸಿರಿ. ಹಾಳೆಯನ್ನು ತಿರುಗಿಸಿ ಅವರು ಎಷ್ಟು ವಸ್ತುಗಳನ್ನು ಹೆಸರಿಸಲಾಗುತ್ತದೋ ಅಷ್ಟನ್ನು ಪಟ್ಟಿ ಮಾಡಲು ಹೇಳಿರಿ. ಆಲೋಚನೆಯನ್ನು ಪುನರ್ವಿಮರ್ಶಿಸಿರಿ: ಒಬ್ಬ "ಸಾಕ್ಷಿಯು" ತಾನು ನೋಡಿದ್ದನ್ನು ಮತ್ತು ಕೇಳಿದ್ದನ್ನು ಹೇಳುತ್ತಾನೆ. ಅಪೊಸ್ತಲರ ಹಾಗೆಯೇ ನಾವು ಸಾಕ್ಷಿಗಳಾಗಿರಬೇಕೆಂದಿಲ್ಲ. ಆದರೆ *ನಾವು* ನೋಡಿದ್ದನ್ನು ಮತ್ತು ಕೇಳಿದ್ದನ್ನು ಹೇಳುವದರಲ್ಲಿ ಸಾಕ್ಷಿಗಳಾಗಿರಬಹುದು. ಮಡಿಕೆಯನ್ನು ಬಿಚ್ಚಿ ಅನ್ವಯವನ್ನು ಹೇಳಿರಿ.

## ಪ್ರಸಂಗದ ಟಿಪ್ಪಣಿ

"ವಿಭಿನ್ನತೆಯಿಂದ ಸಾಕ್ಷಿ ಹೇಳುವದು" ಎಂದು ರಿಕ್ ಅಚ್ಲೆ ಅವರ ಅಪೊಸ್ತಲರಕೃತ್ಯಗಳು 1ರ ಮೇಲೆ ಪ್ರಸಂಗವಿದೆ. ಮೊದಲ ಶತಮಾನದ ಕ್ರೈಸ್ತರು ಸುವಾರ್ತಾ ಭಾವನೆಗೂ ಮತ್ತು ಇಪ್ಪತ್ತನೆಯ ಶತಮಾನದ ಕ್ರೈಸ್ತರು ವ್ಯಾಕ್ತಮಾಡುವದಕ್ಕೂ ಇರುವ ವ್ಯತ್ಯಾಸವನ್ನು ಅದು ತೋರಿಸುತ್ತದೆ. ವ್ಯತ್ಯಾಸವು ಅವರ *ನಂಬಿಕೆಯಲ್ಲಿದೆ.* ಈ ಪ್ರಸಂಗವು ಮೂರು ಅಂಶಗಳಲ್ಲಿದೆ: (1) ಅವರು *ಪುನರುತ್ಥಾನವಾದ* ಯೇಸುವನ್ನು ನಂಬಿದರು; ಇದು ಅವರಿಗೆ ಒಂದು *ಸಂದೇಶವನ್ನು* ಕೊಟ್ಟಿತು. (2) ಯೇಸು *ಆಳುತ್ತಾನೆ* ಎಂದು ನಂಬಿದರು; ಇದು ಅವರಿಗೆ ಒಂದು *ಸೇವೆಯನ್ನು* ಕೊಟ್ಟಿತು. (3) ಅವರು ಯೇಸು *ಹಿಂತಿರುಗಿ ಬರುತ್ತಾನೆಂದು* ನಂಬಿದರು; ಇದು ಅವರಿಗೆ ಒಂದು *ಉದ್ದೇಶ* ಕೊಟ್ಟಿತು.

---

ಟಿಪ್ಪಣಿಗಳು

[1]"ಯೇಸು" ಎಂಬ ಪದವನ್ನು ಪದಸಂಗ್ರಹದಲ್ಲಿ ನೋಡಿರಿ. [2]ಯೇಸು ಮೊದಲು *ಮಾಡಿದನು ನಂತರ ಬೋಧಿಸಿದನು* ನಮ್ಮ ಬೋಧನೆಯು ಫಲಪ್ರದವಾಗಬೇಕಾದರೆ ಮೊದಲು ನಾವು ಬೋಧಿಸುವದನ್ನು ಜೀವಿಸಬೇಕು (1 ತಿಮೊಥಿ 4:16). [3]ಪುನರುತ್ಥಾನದ ಸಂಪೂರ್ಣ ಪಟ್ಟಿ 1 ಕೊರಿಂಥ 15:5-8ದಲ್ಲಿದೆ. ಆದರೆ 1 ಕೊರಿಂಥ 15ರಲ್ಲಿ ನಮೂದಿಸಲ್ಪಡದ ಸಂದರ್ಭಗಳು ಸುವಾರ್ತೆಗಳಲ್ಲಿ ಕಂಡುಬರುತ್ತದೆ ಮತ್ತು ಇನ್ನೂ ಅನೇಕ ಘಟನೆಗಳು ದಾಖಲೆಯಾಗಿದೆ. [4]William Barclay, *The Acts of the Apostles,* The Daily Study Bible Series, rev. ed. (Philadalphia, Pa.: Westminster Press, 1976), 9. [5]ರಾಜ್ಯದ ಕುರಿತು ಯಹೂದ್ಯರು ಹೊಂದಿದ ಅಭಿಪ್ರಾಯವು, ಅನೇಕರು ಯೇಸುವನ್ನು ಮೆಸ್ಸಿಯನೆಂದು ಒಪ್ಪಿಕೊಳ್ಳದಿರುವದಕ್ಕೆ ಕಾರಣವಾಗಿದೆ. ಈ ಅಭಿಪ್ರಾಯವನ್ನು

ಅಪೊಸ್ತಲರು ನಿಖರ ವೆಂದು ಒಪ್ಪಿಕೊಂಡಿದ್ದರೆಂದು ಸುವಾರ್ತೆಗಳಲ್ಲಿನ ಅವರ ವರ್ತನೆಯು ಸೂಚಿಸುತ್ತದೆ. [6]NIV ಬೈಬಲ್ ಪ್ರಕಾರ "ಒಂದು ಬಾರಿ ಆತನು ಅವರೊಂದಿಗೆ ಊಟ ಮಾಡುತ್ತಿರುವಾಗ ..." ಎಂದಿದೆ. ವ್ಯಾಖ್ಯಾನಕಾರರು ಅದರಲ್ಲಿನ ಕ್ರೀಯಾಪದದ ಅರ್ಥವನ್ನು ಒಪ್ಪಿಕೊಳ್ಳುವದಿಲ್ಲ. ಯೇಸು ತನ್ನ ಶಿಷ್ಯರೊಂದಿಗೆ ಊಟ ಮಾಡಿದನೆಂದು ನಮಗೆ ತಿಳಿದದೆ (ಲೂಕ 24:41-43). ಆತನಿಗೆ ಅವಶ್ಯಕತೆಯಿತ್ತು ಎಂಬುದಲ್ಲ, ಆದರೆ ಅವರ ಲಾಭಕ್ಕಾಗಿ. ಈವಚನಗಳಲ್ಲಿ ಬಹುಶಃ ಲೂಕನ ಮನಸ್ಸಿನಲ್ಲಿ ಈ ದೃಷ್ಯವಿತ್ತು. [7]"ದೀಕ್ಷಾಸ್ನಾನ" ಎಂಬ ಪದವನ್ನು ಪದ ಸಂಗ್ರಹದಲ್ಲಿ ನೋಡಿರಿ. [8]"ಅಪೊಸ್ತಲರ ಕೃತ್ಯದಲ್ಲಿ ದೇವಾರಾತ್ಮನ ಕಾರ್ಯ (1)" ಎಂಬ ಸಹಾಯಕ ಲೇಖನವು ಈ ಪುಸ್ತಕದ ಅಂತ್ಯದಲ್ಲಿ ಬರೆಯಲಾಗಿದೆ. [9]"ರಾಜ್ಯದ/ಸಭೆಯ ಸ್ಥಾಪನೆ" ಎಂಬ ಲೇಖನವನ್ನು ನೋಡಿರಿ. [10]ಯೋಹಾನನು ಪವಿತ್ರಾತ್ಮ ಮತ್ತು ಬೆಂಕಿ ಎರಡನ್ನೂ ನಮೂದಿಸಿರುವದು ಮತ್ತು ಯೇಸು ಕೇವಲ ಪರಿಶುದ್ಧಾತ್ಮನನ್ನು ನಮೂದಿಸಿರುವದು ಬಹು ಪ್ರಾಮುಖ್ಯವಾಗಿದೆ. ಯೋಹಾನನು ಎರಡು ಗುಂಪುಗಳನ್ನು ಉದ್ದೇಶಿಸಿ ಮಾತಾಡುತ್ತಿದ್ದನು, ಅವರಲ್ಲಿ ಪಶ್ಚಾತಾಪ ಪಟ್ಟವರು ಮತ್ತು ಪಡದವರು ಇಬ್ಬರೂ ಸೇರಿದ್ದರು. "ಬೆಂಕಿ" ಎಂದು ಸೂಚಿಸುವಾಗ ಅದು ಪಶ್ಚಾತಾಪ ಪಡದವರಿಗೆ ಒದಗುವ ಶಿಕ್ಷೆಯ ಕುರಿತಾಗಿತ್ತು. (ಲೂಕ 3:9, 17). "ಬೆಂಕಿಯ ದೀಕ್ಷಾಸ್ನಾನ" ಇದು ಪಂಚಾಶತ್ತಮ ದಿನದ "ಬೆಂಕಿಯ ನಾಲಿಗೆಗಳನ್ನು" ಸೂಚಿಸಲಿಲ್ಲ, ಆದರೆ ದುಷ್ಟರಿಗೆ ಆಗುವ ನಿತ್ಯತ್ವದ ನರಕದ ಬೆಂಕಿಯ ಶಿಕ್ಷೆಯನ್ನು ಸೂಚಿಸಿತು (ಪ್ರಕಟನೆ 20:14, 15).

[11]ಅಪೊಸ್ತಲರು ರಾಜ್ಯದ ಸ್ವರೂಪವನ್ನು ಅರ್ಥಮಾಡಿಕೊಂಡರೆಂದು ಕೆಲವರು ನಂಬುತ್ತಾರೆ, ಆದರೆ ಯಾವಾಗ ಅದು ಸ್ಥಾಪಿತವಾಗುವದು ಎಂದು ಸುಮ್ಮನೇ ಕೇಳುತ್ತಿದ್ದರು. ಇದು ಸಾಧ್ಯವಿದೆ, ಅದರೂ ರಾಜ್ಯದ ಕುರಿತ ಯೇಸುವಿನ ಬೋಧನೆಯು ಅವರಿಗೆ ಸ್ಪಷ್ಟವಾಗಿಲ್ಲವೆಂದು "ಪುನಶ್ಚೇತನ" ಮತ್ತು "ಇಸ್ರಾಯೇಲ್" ಎಂಬ ಪದಗಳು ಸೂಚಿಸುತ್ತವೆ. [12]F. F. Bruce, *The Book of Acts,* The New International Commentary on the New Testament, rev. ed. (Grand Rapids, Mich.: Wm. B. Eerdmans Publishing Co., 1988), 36. [13]ಭಾಷಾಂತರಿಸಲ್ಪಟ್ಟ ಗ್ರೀಕ್ ಪದಗಳು "ಸಮಯ" ಮತ್ತು "ಕಾಲ" ಎರಡೂ ಒಂದೇ ಅರ್ಥವನ್ನು ಕೊಡುತ್ತವೆ. ಒಂದೇ ಆಲೋಚನೆಯನ್ನು ಸ್ಪಷ್ಟಪಡಿಸುವದಕ್ಕೆ ಯೇಸು ಬಹುಶಃ ಎರಡೂ ಪದಗಳನ್ನು ಬಳಸಿರಬಹುದು: ದೇವರು ತನ್ನ ರಾಜ್ಯವನ್ನು ಸ್ಥಾಪಿಸುವ ನಿರ್ಧಿಷ್ಟವಾದ ಸಮಯವನ್ನು ತಿಳುಕೊಳ್ಳುವದು ಅವರ ಸ್ಥಾನವಾಗಿರಲಿಲ್ಲ. KJVಯಲ್ಲಿ "ಕಾಲಗಳು ಮತ್ತು ಸಮಯಗಳು" ಎಂದಿದೆ; NIVಯಲ್ಲಿ "ಸಮಯಗಳು ಮತ್ತು ದಿನಾಂಕಗಳು" ಎಂದಿದೆ. [14]ಪಂಚಾಶತ್ತಮದ ಘಟನೆಗಳು ಯೇಸುವಿನ ಬೋಧನೆಯನ್ನು ಅವರ ಸರಿಯಾದ ದೃಷ್ಟಿಕೋನಕ್ಕೆ ನಡೆಸಿತು. ಪಂಚಾಶತ್ತಮ ದಿನದ ತರುವಾಯ, ಅಪೊಸ್ತಲರು ರಾಜ್ಯದ ಕುರಿತು ಭೌತಿಕವಾಗಿ ಅಥವಾ ರಾಜಕೀಯವಾಗಿ ನಮೂದಿಸುವ ತಪ್ಪನ್ನು ಮಾಡಲಿಲ್ಲ. [15]ಅವರ ಕಷ್ಟವು ಅಪೊಸ್ತಲರ ಕೃತ್ಯ ಪುಸ್ತಕದಲ್ಲಿ ನಮೂದಿಸಿದಂತೆ ಅವರ ಕೃತ್ಯಗಳಲ್ಲಿ ತೋರಿ ಬಂತು: ಯೆರೂಸಲೇಮಿನಿಂದ ಅವರನ್ನು ಹೊರತರಲು ಮತ್ತು ಅನ್ಯರನ್ನು ಸ್ವೀಕರಿಸಲು ದೇವರು ಅವರಿಗೆ ಬಲವಾಗಿ "ತಿವಿಯಬೇಕಾಯಿತು." [16]ಅಪೊಸ್ತಲರ ಕೃತ್ಯಗಳು ಪೌಲನ ದೂರದ ಪ್ರಯಾಣಗಳನ್ನು ಕುರಿತು ತಿಳಿಸುತ್ತದೆ. ಆದರೆ ಈ ಅಪ್ಪಣೆಯು ಶಿಷ್ಯರ ಸುವಾರ್ತಾ ಪ್ರಯಾಣದ ಕುರಿತು ಆದಿ ಸಭೆಯ ಆಚರಣೆಗಳು ತಿಳಿಸುತ್ತದೆ. ಈ ಆಚರಣೆಗಳು ಪ್ರತಿಯೊಂದು ವಿವರಣೆಯಲ್ಲಿ ನಿಖರವಾಗಿವೆ ಎಂದು ಹೇಳಲಾಗುವದಿಲ್ಲ. ಆದರೆ ಈ ಹನ್ನೆರಡು ಜನ ಶಿಷ್ಯರು ಬಹು ದೂರದ ವರೆಗೆ ಯೇಸುವಿನ ಸಂದೇಶವನ್ನು ತೆಗೆದುಕೊಂಡು ಹೋದರೆಂಬ ಅಂಶದಲ್ಲಿ ಸತ್ಯವಾಗಿದ್ದಾರೆ! [17]ಈ ಪತ್ರಿಕೆಯನ್ನು ಪಡೆಯುತ್ತಿರುವ ಜಗತ್ತಿನ ಅನೇಕ ಸ್ಥಳಗಳು ಇನ್ನೂ "ಸೇವಾ ಕೇಂದ್ರಗ ಳೆಂದು" ಗುರುತಿಸಲ್ಪಡುತ್ತವೆ. ಆದಾಗ್ಯೂ, ಸೇವೆಯ ಪ್ರಾರಂಭದಿಂದ ಯಾವದೇ "ಸೇವಾ ಕೇಂದ್ರವು" ದೇವರ ಅಪೇಕ್ಷೆಯ ಮೇರೆಗೆ ಆಗಬೇಕಾದರೆ, ಮಹಾ ನಿಯೋಜನೆಯನ್ನು ನೆರವೇರಿಸಲು ಮೊದಲೇ ಮಾಡಬೇಕು! [18]ಅಪೊಸ್ತಲರಂತೆ ನಾವು ಸಾಕ್ಷಿಗಳಾಗದಿದ್ದರೂ, ಇಂದಿನ ಕ್ರೈಸ್ತರ ಸಾಕ್ಷಿಯನ್ನು ಸೂಚಿಸುವದಕ್ಕೆ "ಸಾಕ್ಷಿ" ಎಂಬ ಪದವನ್ನು ಉಪಯೋಗಿಸಲು ಕೆಲವರು ಹಿಂಜರಿಯುತ್ತಾರೆ. ಅಪೊಸ್ತಲರು ಮಾಡಿದ ಕಾರ್ಯಗಳನ್ನು ಯೊಚಿಸಿ ಲೂಕನು ಮೂಲವಾದ ಈ ಪದವನ್ನು ಬಳಸಿದನು. ಯೇಸುವನ್ನು ಕುರಿತು ಇತರರಿಗೆ ಹೇಳುವಾಗ "ಸಾಕ್ಷಿ" ಎಂಬ ಪದವನ್ನು ನಾವು ಬಳಸಬಾರದು. ಮತ್ತು ಲೂಕನು ಈ ಪದವನ್ನು ಆಗಾಗ್ಗೆಬೇರೆ ರೀತಿಯಲ್ಲಿ ಉಪಯೋಗಿಸಿರುವದರಿಂದ, ನಾವು ಕ್ರೈಸ್ತರನ್ನು ಸೂಚಿಸಿ ಈ ಉಪಯೋಗಿಸಲ್ಪಡುವದಕ್ಕೆ ನಾವು ವಿರೋಧಿಸಬಾರದು. [19]ಅಪೊಸ್ತಲರ ಕೃತ್ಯ 6:13; 13:22; 14:3, 17; 16:2; 22:12; 26:5. [20]ಅಪೊಸ್ತಲರ ಕೃತ್ಯಗಳು 7ರಲ್ಲಿ ನಾವು ಸ್ತೇಫನನ ಉದಾಹಾರಣೆಯನ್ನು ನೋಡುತ್ತೇವೆ.

[21]ಯೇಸು "ಏರಿಸಲ್ಪಟ್ಟನು" ಎಂಬ ಅಂಶಕ್ಕೆ ಕೆಲವರು ಕಳಕಳಿ ವ್ಯಕ್ತಪಡಿಸಿದ್ದಾರೆ; ಪರಲೋಕವು ಮೇಲೆ ಇದೆ ಎಂಬ ಅಭಿಪ್ರಾಯವನ್ನು ಇದು ಸೂಚಿಸುತ್ತದೆ ಎಂಬುದು ಅವರ ವಿಚಾರ (ಮತ್ತು ನರಕವು

ಕೆಳಗೆ ಇದೆ) … ಆದರೆ ಸ್ವಲ್ಪ ಆಲೋಚಿಸಿರಿ: ಯೇಸು ನಿಜವಾಗಿಯೂ ಭೂಲೋಕವನ್ನು ಬಿಟ್ಟು ಹೋದರು ಎಂದು ದೇವರು ಮನುಷ್ಯ ಜ್ಞಾನಕ್ಕೆ ಹೇಗೆ ತಿಳಿಸಬೇಕು? ಆತನು ಇನ್ನಾವ ದಾರಿಯಿಂದ ಹೋಗ ಬೇಕು, ಮೇಲೆ ಅಲ್ಲದೇ - ಬೇರೆ ಮಾತುಗಳಲ್ಲಿ ಹೇಳುವದಾದರೆ, ಭೂಮಿಯಿಂದ ದೂರ? [22]ಎಫೆಸ್ 4:10; 1 ತಿಮೋಥಿ 3:16; 1 ಪೇತ್ರ 3:22. [23]ಲೂಕನು ದೇವದೂತರನ್ನು ಸೂಚಿಸಿದ್ದು ಇದು ಒಂದು ರೀತಿಯಲ್ಲಿ (ಲೂಕ 24:4). ಅಲ್ಲಿ ಎರಡು ಸಾಕ್ಷಿಗಳಾಗಿ ಸೇವೆ ಮಾಡಲು ಬಹುಶಃ ಅಲ್ಲಿ ಇಬ್ಬರು ದೇವದೂತರಿರಬಹುದು (ಧರ್ಮೋಪದೇಶಕಾಂಡ 19:15). [24]"ಆಕಾಶದ ಕಡೆಗೆ ನೋಡುತ್ತಾ" ಸಮಯ ಕಳೆಯುವ ಬದಲು, ಶಿಷ್ಯರು ಯೆರೂಸಲೇಮಿಗೆ ಹಿಂತಿರುಗಿ ಕೆಲಸಕ್ಕೆ ಸಿದ್ಧರಾಗಬೇಕು ಎಂದು ಬೋಧಕರು ಅನೇಕ ಬಾರಿ ಗಮನಿಸಿದ್ದಾರೆ. ಅವರ ಅನ್ವಯವು ಹೀಗಿವೆ: "ಕೆಲವರು ಇಷ್ಟು ಪರಲೋಕ ಭಾವದವರಾಗಿದ್ದಾರೆ ಎಂದರೆ, ಅವರು ಭೂಲೋಕದ ಕುರಿತು ಪ್ರಯೋಜನವಿಲ್ಲದವರು." [25]ಇದನ್ನು ಒಂದು ಬಲವಾದ ಸೇನೆಯೊಂದಿಗೆ ಹೋರಾಡುತ್ತಿರುವ ಒಂದು ಚಿಕ್ಕ ಸೇನೆಯೊಂದಿಗೆ ಹೋಲಿಸ ಬಹುದು. ಆದರೆ ಹೋರಾಡುತ್ತಿರುವ ಒಂದು ದೊಡ್ಡ ಸೇನಾಬಲವು ತಮ್ಮ ಮಾರ್ಗದಲ್ಲಿ ಸಹಾಯಕ್ಕಾಗಿ ಇದೆ ಎಂಬ ತಿಳುವಳಿಕೆಯಿಂದ ಹೋರಾಡಬಹುದು! [26]"ಮಾರನಾಥಾ" ಈ ಪದವನ್ನು ಶಬ್ಧ ಸಂಗ್ರಹದಲ್ಲಿ ನೋಡಿರಿ. [27]ಕೆಲವರು ಕರ್ತನು ಹಿಂದೆ ಬರುವ ಸಮಯವನ್ನು ಪ್ರಕಟಿಸಿದ್ದಾರೆ, ಆತನು ಬರದಿದ್ದಾಗ ನಾಚಿಕೆಗೊಂಡದ್ದುಂಟು. ಆಗ ಅವರು ಹೇಳಿದ್ದು: (ಕರ್ತನು ಅದೃಷ್ಯರೂಪವಾಗಿ ಆಯ್ದುಕೊಂಡ ಕೆಲವರಿಗೆ ಮಾತ್ರ ಕಾಣಿಸಿಕೊಂಡನು ಮತ್ತು ಪರಲೋಕಕ್ಕೆ ಪುನಃ) ಹೋಗಲು ನಿರ್ಧರಿಸಿದನು ಮತ್ತೊಮ್ಮೆ ಬರುತ್ತಾನೆ. ಎರಡನೇಯ ಬರೋಣದ ಕುರಿತು ಅಪೊಸ್ತಲರ ಕೃತ್ಯಗಳು 1:11ರ ಮತ್ತು ಇತರ ಭಾಗಗಳು ಇಂಥ ಸ್ವ ಸಂತೋಷಕ್ಕಾಗಿ ಇರುವ ತಪ್ಪುಗಳನ್ನು ಬಯಲು ಮಾಡುತ್ತವೆ (1 ಥೆಸಲೋನಿಕ 4:16). [28]ರಿಕ್ ಅಚ್ಲೆ, 9ಸೆಪ್ಟೆಂಬರ 1984 "ಕ್ರಾಂತಿಯ ವಿಕಸನ," ಸಥರ್ನ್ ಹಿಲ್ ಚರ್ಚ್ ಆಫ್ ಕ್ರೈಸ್ಟ, ಅಬಿಲೆನೆ, ಟೆಕ್ಸಸ್‌ನಲ್ಲಿ ಪ್ರಸಂಗಿಸಿದ್ದು.